


# ಬ್ರೇಕಿಂಗ್ ನ್ಯೂಸ್!

ಡೈರಿ ಬರೆಯುತ್ತಿರಬೇಕು, ಐಟಿ ರೈಡ್ ಆಗುತ್ತಿರಬೇಕು, ಕಪ್ಪ ಸಂದಾಯವಾಗುತ್ತಿರಲೇ ಬೇಕು. ಒಟ್ಟಾರೆ ನ್ಯೂಸ್ 'ಬ್ರೇಕ್' ಆಗುತ್ತಿರಬೇಕು. ಇಲ್ಲದಿದ್ದರೆ 'ಅಭಿವೃದ್ಧಿ' ಹೇಗೆ ಸಾಧ್ಯ– ಚಾನಲ್‌ಗಳದ್ದು!

★ ಕೃಷ್ಣ ಸುಬ್ಬರಾವ್

**NEWS** ಅಂದ್ರೆ ನಾಲ್ಕು ದಿಕ್ಕುಗಳಿಂದಲೂ ಬರುವ ಸುದ್ದಿಗಳೆಂದು ಹೇಳ್ತಾರೆ. **North, East, West, South!** ಇದೆಲ್ಲ ಹಳೇ ಕಾಲದ ಗೊಡ್ಡು ಮುದುಕರ ವ್ಯಾಖ್ಯಾನ ಎನ್ನಬಹುದೀಗ. ಏಕೆಂದರೆ ಇದು ಅಕ್ಷರ ಮಾಧ್ಯಮಕ್ಕೆ ಅನ್ವಯವಾಗಬಹುದು. ಆದರೆ ದೃಶ್ಯಮಾಧ್ಯಮಕ್ಕೆ ಸರಿಹೊಂದುವುದಿಲ್ಲ! ಕೇವಲ ನಾಲ್ಕು ದಿಕ್ಕುಗಳಿಂದ ಬರುವ ಸುದ್ದಿ ನಮ್ ಟೀವಿಗಳಿಗೆ ಸಾಕಾಗುವುದಿಲ್ಲ. ದೃಶ್ಯ ಮಾಧ್ಯಮಕ್ಕೆ ಅಷ್ಟ ದಿಕ್ಕುಗಳಿಂದಲೂ ಸುದ್ದಿ ಸೋರಬೇಕು– ಪ್ರಚಾರ ಪ್ರಪಂಚ ಅಷ್ಟೊಂದು ವ್ಯಾಪಕವಾಗಿದೆ ಈಗ. ಬೆಳಿಗ್ಗೆ ಎದ್ದ ತಕ್ಷಣ ಕಾಫಿ ಹೀರುವಾಗ ದಿನಪತ್ರಿಕೆ ಹಿಡಿದು ಓದುವ ಜನರಿಗೆ ಸುದ್ದಿ ಸಂಕ್ಷಿಪ್ತವಾಗಿದ್ದಷ್ಟೂ ಚೆನ್ನ. ಆದರೆ ಇಪ್ಪತ್ತನಾಲ್ಕು ತಾಸು ಜನರಿಗೆ ಸುದ್ದಿ ಕೊಡುವ ಚಾನೆಲ್‌ಗಳ ಕಷ್ಟದ ಬಗ್ಗೆ ಯೋಚನೆ ಮಾಡಬೇಕಲ್ವೆ? ಈಗಿನ ಕಾಲಕ್ಕೆ ಕೇವಲ ನ್ಯೂಸ್ ಕೊಟ್ಟರೆ ಏನ್ ಉಪಯೋಗ? ಬ್ರೇಕಿಂಗ್ ನ್ಯೂಸ್ ಕೊಡಬೇಕಲ್ಲವೆ?

'ನ್ಯೂಸ್'ನಲ್ಲಿ 'ನ್ಯೂ' ಇರೋದ್ರಿಂದ ಹೊಸದೇನಾದರೂ ಇರಬೇಕು ನಿಜ. ಆದರೆ ಈಗ ಹಳೇ ಸುದ್ದಿಗೆ ಹೊಸ ತಿರುವು ಇದ್ದರೂ ಸಾಕು. ಐ.ಸಿ.ಯೂ ನಲ್ಲಿದ್ದ ಮಂತ್ರಿ ವಾರ್ಡ್‌ಗೆ ವರ್ಗಾವಾಗಬಹುದೆಂಬ ಸುದ್ದಿ ಬ್ರೇಕಿಂಗ್ ಸುದ್ದಿಯಾಗುತ್ತೆ. ಮರುಕ್ಷಣವೇ ಆ ಮಂತ್ರಿ ಸತ್ತರೆ ಶ್ರದ್ಧಾಂಜಲಿ ಅರ್ಪಿಸುವ ಹಾಗೆ ಒಂದು ರಿಹಸರ್ಲ್ ಕೂಡಾ ಟೀವಿ ಸ್ಟೇಶನ್‌ನಲ್ಲಿ ನಡೆಯುತ್ತದೆ. 'ಇಂದಿನ ಸುದ್ದಿ ನಾಳೆಗೆ ರದ್ದಿ' ಎನ್ನುವುದು ಪತ್ರಿಕಾ ಮಾಧ್ಯಮಕ್ಕೆ ಸರಿ. ಏಕೆಂದರೆ ಹಳೇ ಪತ್ರಿಕೆಗಳನ್ನು ತೂಕಕ್ಕೆ ಹಾಕಿ ನಾಲ್ಕು ಕಾಸು ವಾಪಸ್ಸು ಪಡೆಯುತ್ತೇವಲ್ಲ! ನ್ಯೂಸ್ ಚಾನೆಲ್‌ನ ಸುದ್ದಿ ಮಾತ್ರ ಎಂದೂ ರದ್ದಿಯಾಗುವುದೇ ಇಲ್ಲ. ದಿನಗಟ್ಟಲೆ, ವಾರಗಟ್ಟಲೆ ಜೀವಂತವಾಗಿರುತ್ತೆ. ಇಲ್ಲಿ 'ಇದಮಿತ್ಥಂ'ನ ಮಿತಿಯಿರುವುದಿಲ್ಲ, ಇರಲೂಬಾರದು, ಹಾಗಿದ್ದುಬಿಟ್ಟರೆ ಆ್ಯಂಕರ್‌ಗಳಿಗೇನು ಕೆಲಸ?

ವಿಷಯ ಎಷ್ಟೇ ಸಾಧಾರಣವಾಗಲಿ, ಅದಕ್ಕೆ ಕಡೇ ಪಕ್ಷ ಸಮಾಜದ ವಿವಿಧ ಕ್ಷೇತ್ರಗಳ ಪ್ರತಿನಿಧಿಗಳು ತಮ್ಮ ಕೈಯಲ್ಲಾದ (ಬಾಯಲ್ಲಾದ?) ಬೆಂಬಲ ಅಥವಾ ಬಹಿಷ್ಕಾರ ಅಥವಾ ಪ್ರತಿಭಟನೆ ಪ್ರಕಟಿಸಲೇಬೇಕು. ಸುದ್ದಿ ಬಿಸಿಬಿಸಿ ಇರುತ್ತೆ ಅಂತ ನಾಲ್ಕಾರು ಜನರನ್ನು ಹಲಗೆಯ (ಪ್ಯಾನೆಲ್) ಮೇಲೆ ಕೂರಿಸಿ ಅದನ್ನು (ಸುದ್ದಿಯನ್ನು) ಆರಿಸಿ, ವೀಕ್ಷಕರು ಸುಲಭವಾಗಿ ಅರಗಿಸಿಕೊಳ್ಳುವಂತೆ ಮಾಡುತ್ತಾರೆ. ಜಾತಿ ಸ್ಪರ್ಶವಿದ್ದ ಸುದ್ದಿಯಾದರೆ ಬೇರೆ ಬೇರೆ ಜಾತಿಯ ಪ್ರತಿನಿಧಿಗಳನ್ನು ರಾಜಕೀಯ ಪಕ್ಷಗಳಿಗೆ